# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 216 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಮಂಡ್ಯದ ಅಶೋಕನಗರದಲ್ಲಿರುವ ಕಾವೇರಿ ನೀರಾವರಿ ನಿಗಮಕ್ಕೆ ಸೇರಿರುವ ಬಹುತೇಕ ವಸತಿ ಗೃಹಗಳು ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. ಮಂಡ್ಯದ ಅಶೋಕನಗರದಲ್ಲಿರುವ ಕಾವೇರಿ ನೀರಾವರಿ ನಿಗಮಕ್ಕೆ ಸೇರಿರುವ ಕೆಲವೊಂದು ವಸತಿಗೃಹಗಳು ಶಿಥಿಲವಾಗಿರುವುದು ಗಮನಕ್ಕೆ ಬಂದಿರುತ್ತದೆ.<br><br>ಸದರಿ ವಸತಿ ಗೃಹಗಳ ನಿರ್ವಹಣೆ ಹಾಗೂ ಅಗತ್ಯ ದುರಸ್ತಿ ಕಾಮಗಾರಿಗಳನ್ನು 2701 ಲೆಕ್ಕ ಶೀರ್ಷಿಕೆಯಡಿಯಲ್ಲಿ ನೀಡುವ ಅನುದಾನಕ್ಕೆ ಅನುಗುಣವಾಗಿ ಕೈಗೊಳ್ಳಲಾಗುತ್ತಿದೆ.<br><br>ಶಿಥಿಲವಾಗಿರುವ 9 ವಸತಿ ಗೃಹಗಳನ್ನು ಮುಂಬರುವ ವರ್ಷಗಳಲ್ಲಿ ಅನುದಾನ ಲಭ್ಯತೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಪುನರ್ ನಿರ್ಮಾಣ ಮಾಡುವ ಕುರಿತು ಪರಿಶೀಲಿಸಲಾಗುವುದು. |
| ಆ) | ಇದ್ದಲ್ಲಿ ಸದರಿ ಸ್ಥಳದಲ್ಲಿ ವಸತಿ ಗೃಹಗಳನ್ನು ಪುನರ್ ನಿರ್ಮಾಣ ಮಾಡುವ ಕುರಿತು ಸರ್ಕಾರದ ನಿಲುವೇನು; | |
| ಇ) | ಇಲ್ಲಿ ನಿರ್ಮಿಸಲ್ಪಟ್ಟಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು; ಈ ವಸತಿ ಗೃಹಗಳನ್ನು ಯಾವ ವರ್ಷ ನಿರ್ಮಿಸಲಾಗಿದೆ; ಇದರ ಒಟ್ಟು ವಿಸ್ತೀರ್ಣ ಎಷ್ಟು; | ಮಂಡ್ಯದ ಅಶೋಕನಗರದಲ್ಲಿರುವ ಒಟ್ಟು ವಸತಿಗೃಹಗಳ ಸಂಖ್ಯೆ: 95<br><br>ಮಂಗಳೂರು ಹೆಂಚಿನ ಹಾಗೂ ಎ. ಸಿ. ಶೀಟ್ ವಸತಿಗೃಹಗಳನ್ನು 1935ರಲ್ಲಿ, ನಾಮಾಂಕಿತ ಅಧಿಕಾರಿಗಳ ಪ್ರತ್ಯೇಕ ವಸತಿಗೃಹಗಳನ್ನು 1957 ರಲ್ಲಿ ಮತ್ತು ಆರ್.ಸಿ.ಸಿ. ವಸತಿ ಸಮುಚ್ಚಯ ಮನೆಗಳುಳ್ಳ ಸಂಕೀರ್ಣಗಳನ್ನು 1984 ರಿಂದ 1994 ರ ಅವಧಿಯಲ್ಲಿ ನಿರ್ಮಿಸಲಾಗಿದೆ.<br><br>ವಸತಿಗೃಹಗಳ ನಿವೇಶನಗಳ ಒಟ್ಟು ವಿಸ್ತೀರ್ಣ 09 ಎಕರೆ 32 ಗುಂಟೆ ಇರುತ್ತದೆ. |
| ಈ) | ನಿರ್ಮಿಸಲ್ಪಟ್ಟಿರುವ ವಸತಿ ಗೃಹಗಳ ಬಾಳಿಕೆ ಅವಧಿ (Life Time/Durability Period) ಎಷ್ಟು; | ಸದರಿ 95 ವಸತಿಗೃಹಗಳಲ್ಲಿ ಮಂಗಳೂರು ಹೆಂಚಿನ ಹಾಗೂ ಎ.ಸಿ. ಶೀಟ್ ಹಾಗೂ ಆರ್.ಸಿ.ಸಿ. ವಸತಿಗಳ ಮಿಶ್ರಣವಿದ್ದು, ಸುಮಾರು 30 ರಿಂದ 60 ವರ್ಷ ಹಳೆಯದಾಗಿರುತ್ತವೆ. ಈ ವಸತಿಗೃಹಗಳನ್ನು ಕಾಲಕಾಲಕ್ಕೆ ದುರಸ್ತಿ ಪಡಿಸಿ ಉಪಯೋಗಿಸಲಾಗುತ್ತಿದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಉ)</td><td>ಪ್ರಸ್ತುತ ಉಪಯೋಗಿಸುತ್ತಿರುವ ಖಾಲಿಯಿರುವ ಹಾಗೂ ಉಪಯೋಗಕ್ಕೆ ಯೋಗ್ಯವಲ್ಲದ ವಸತಿ ಗೃಹಗಳ ಸಂಖ್ಯೆ ಎಷ್ಟು: (ವಿವರ ನೀಡುವುದು)</td><td>ಪ್ರಸ್ತುತ 67 ವಸತಿ ಗೃಹಗಳನ್ನು ಉಪಯೋಗಿಸಲಾಗುತ್ತಿದ್ದು, 19 ವಸತಿಗೃಹಗಳು ಖಾಲಿ ಇರುತ್ತವೆ ಹಾಗೂ 09 ವಸತಿ ಗೃಹಗಳು ಉಪಯೋಗಕ್ಕೆ ಯೋಗ್ಯವಾಗಿರುವುದಿಲ್ಲ.</td></tr>
<tr><td>ಊ)</td><td>ಕಳೆದ 5 ವರ್ಷಗಳಲ್ಲಿ ಇಲ್ಲಿನ ವಸತಿ ಗೃಹಗಳ ದುರಸ್ಥಿ, ನಿರ್ವಹಣೆಗಾಗಿ ಭರಿಸಲಾದ ವೆಚ್ಚ ಎಷ್ಟು: (ವರ್ಷವಾರು ಮಾಹಿತಿ ನೀಡುವುದು)</td><td>ಸದರಿ ವಸತಿ ಗೃಹಗಳ ನಿರ್ವಹಣೆ ಹಾಗೂ ದುರಸ್ತಿಗಾಗಿ 2701 ಲೆಕ್ಕ ಶೀರ್ಷಿಕೆಯಡಿಯಲ್ಲಿ ವರ್ಷವಾರು ವೆಚ್ಚದ ವಿವರ ಕೆಳಗಿನಂತೆ ನೀಡಲಾಗಿದೆ:<br><table><tr><th>ಕ್ರ. ಸಂ.</th><th>ವರ್ಷ</th><th>ವೆಚ್ಚ (ರೂ. ಲಕ್ಷಗಳಲ್ಲಿ)</th></tr><tr><td>1</td><td>2020-21</td><td>1.64</td></tr><tr><td>2</td><td>2021-22</td><td>20.73</td></tr><tr><td>3</td><td>2022-23</td><td>15.52</td></tr><tr><td>4</td><td>2023-24</td><td>10.77</td></tr><tr><td>5</td><td>2024-25</td><td>8.49</td></tr></table></td></tr>
</table>

**ಸಂಖ್ಯೆ:ಜಸಂಇ 6 ಎನ್‌ಎಲ್‌ಎ 2025**

**(ಡಿ. ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**